# 32. ಕುಸುಬೆ

ಕುಸುಬೆಯನ್ನು ಪ್ರಮುಖವಾಗಿ ಕಪ್ಪು ಮಣ್ಣು ಪ್ರದೇಶದಲ್ಲಿ ಹಿಂಗಾರಿನಲ್ಲಿ ಬೆಳೆಯಲಾಗುತ್ತಿದೆ.

**ತಳಿಗಳು ಮತ್ತು ವಿಶೇಷ ಗುಣಗಳು**

| *ತಳಿಗಳು* | *ಬಿತ್ತನೆ ಕಾಲ* | *ಕಾಲಾವಧಿ (ದಿನಗಳು)* | *ಇಳುವರಿ ಧಾನ್ಯ (ಕ್ವಿಂ. / ಎ)* | *ವಿಶೇಷ ಗುಣಗಳು* |
|---|---|---|---|---|
| ಅಣ್ಣಿಗೇರಿ–1 | ಅಕ್ಟೋಬರ್–ನವೆಂಬರ್ | 115–120 | 4–5 | ಜನಪ್ರಿಯವಾದ ತಳಿ, ಅಧಿಕ ಇಳುವರಿ, ಬರ ನಿರೋಧಕ ಶಕ್ತಿ ಹೊಂದಿದೆ |
| ಎ–2 | | 120–125 | | ಅಧಿಕ ಎಣ್ಣೆ ಅಂಶ ಹೊಂದಿದೆ |
| ಎಸ್.ಎ.ಆರ್.ಐ–6 | | 125–130 | | ಮುಳ್ಳುಗಳಿಲ್ಲದ ತಳಿ |

**ಬೇಸಾಯಕ್ಕೆ ಬೇಕಾಗುವ ಸಾಮಗ್ರಿಗಳು (ಎಕರೆಗೆ)**

| *ಸಾಮಗ್ರಿಗಳು* | *ಪ್ರಮಾಣ* |
|---|---|
| ಬೀಜ (ಕಿ.ಗ್ರಾಂ) | 3 – 3.5 |
| ಕೊಟ್ಟಿಗೆ ಗೊಬ್ಬರ ಅಥವಾ ಕಾಂಪೋಸ್ಟ್ (ಟನ್) | 2 – 2.5 |
| **ರಸಾಯನಿಕ ಗೊಬ್ಬರಗಳು (ಕಿ.ಗ್ರಾಂ)** | |
| ಸಾರಜನಕ | 16 |
| ರಂಜಕ | 16 |
| ಪೊಟ್ಯಾಷ್ | 5 |
| **ಲಘು ಪೋಷಕಾಂಶಗಳು** (ಕಿ.ಗ್ರಾಂ .) | |
| ಗಂದಕ | 12 |

**ಬಿತ್ತನೆ ಮತ್ತು ಅಂತರ ಬೇಸಾಯ**

ಬಿತ್ತನೆಗೆ 3–4 ವಾರಗಳ ಮುಂಚೆ ಕೊಟ್ಟಿಗೆ / ಕಾಪೋಸ್ಟ್ ಗೊಬ್ಬರವನ್ನು ಮಣ್ಣಿನಲ್ಲಿ ಸೇರಿಸುವುದು. ಬಿತ್ತನೆ ಬೀಜವನ್ನು ಸಾಲಿನಿಂದ ಸಾಲಿಗೆ 2 ಅಡಿ ಹಾಗೂ ಗಿಡದಿಂದ ಗಿಡಕ್ಕೆ 1 ಅಡಿ ಅಂತರದಲ್ಲಿ ಬಿತ್ತುವುದು. ಬಿತ್ತನೆಗೆ ಮುಂಚೆ ಪ್ರತಿ ಕಿ.ಗ್ರಾಂ. ಬಿತ್ತನೆ ಬೀಜವನ್ನು 2.5 ಗ್ರಾಂ ಕ್ಯಾಪ್ಟಾನ್ ಔಷಧಿಯಿಂದ ಉಪಚರಿಸಿ, 2 ಅಡಿ ಅಂತರದ ಸಾಲುಗಳಲ್ಲಿ 1 ಅಡಿ ಅಂತರದಲ್ಲಿ ಬಿತ್ತುವುದು. ಬಿತ್ತನೆಗೆ ಮೊದಲು ಶಿಫಾರಸ್ಸು ಮಾಡಿದ ರಸಾಯನಿಕ ಗೊಬ್ಬರಗಳು ಮತ್ತು ಲಘು ಪೋಷಕಾಂಶ ಗಂಧಕವನ್ನು ಮಣ್ಣಿನಲ್ಲಿ ಬೆರೆಸುವುದು. ಬಿತ್ತಿದ 3–4 ಹಾಗೂ 7–8ನೇ ವಾರಗಳಲ್ಲಿ ಅಂತರ ಬೇಸಾಯ ಕೈಗೊಳ್ಳುವುದು. ಗಂಧಕವನ್ನು ಸೂಪರ್ ಫಾಸ್ಫೇಟ್ ರೂಪದಲ್ಲಿ ಬೆಳೆಗೆ ಕೊಡುವುದು ಲಾಭದಾಯಕ, ಒಂದು ವೇಳೆ ಸೂಪರ್ ಫಾಸ್ಫೇಟ್ ಸಿಗದಿದ್ದಲ್ಲಿ, ರಸಾಯನಿಕ ಗೊಬ್ಬರಗಳ ಜೊತೆಗೆ 80 ಕಿ.ಗ್ರಾಂ. ಜಿಪ್ಸಂ ಅನ್ನು ಬಳಸುವುದು, ಇದರಿಂದ ಗಂಧಕ ಪೋಷಕಾಂಶವನ್ನು ಸಹ ಬೆಳೆಗೆ ಒದಗಿಸಿದಂತಾಗುವುದು.

**ಕಡಿಮೆ ಖರ್ಚಿನ ಮುಖ್ಯವಾದ ಬೇಸಾಯ ಕ್ರಮಗಳು:**

- ಶಿಫಾರಸ್ಸು ಮಾಡಿದ ತಳಿಗಳನ್ನೇ ಉಪಯೋಗಿಸುವುದು.
- ಬೆಳೆಯನ್ನು ಅಕ್ಟೋಬರ್ 15 ರಿಂದ ನವೆಂಬರ್ 15 ರವರೆಗೆ ಬಿತ್ತುವುದು.
- ಬಿತ್ತನೆಯಾದ 3–4 ಮತ್ತು 7–8 ವಾರಗಳಲ್ಲಿ ಅಂತರ ಬೇಸಾಯ ಮಾಡುವುದು.

## ಸಸ್ಯ ಸಂರಕ್ಷಣೆ: ಪ್ರಮುಖ ಕೀಟಗಳು, ರೋಗಗಳು ಹಾಗೂ ನಿರ್ವಹಣೆ

**ಕೀಟಗಳು**

| ಕೀಟಗಳು | ಹಾನಿಯ ಲಕ್ಷಣಗಳು | ಪರಿಣಾಮಕಾರಿ ಕೀಟನಾಶಕಗಳು | ಪ್ರಮಾಣ ಪ್ರತಿ ಲೀಟರ್ ನೀರಿಗೆ | ಎಕರೆಗೆ ಪ್ರತಿ ಸಿಂಪರಣೆಗೆ | ಬಳಸಬೇಕಾದ ಹಂತ ಮತ್ತು ವಿಧಾನ |
|---|---|---|---|---|---|
| ಸಸ್ಯಹೇನು | ನೂರಾರು ಸಸ್ಯಹೇನುಗಳು ಗಿಡದ ಸುಳಿ ಭಾಗದಲ್ಲಿ ಸೇರಿ, ಎಲೆ, ಹೂ, ಮೊಗ್ಗುಗಳಿಂದ ರಸ ಹೀರುತ್ತಿರುತ್ತವೆ. ಅಂತಹ ಎಲೆಗಳು ಹಳದಿ ಬಣ್ಣಕ್ಕೆ, ಹೂ ಮೊಗ್ಗುಗಳು ಪೂರ್ತಿಯಾಗಿ ಅರಳುವುದಿಲ್ಲ. ಎಲೆಗಳ ಮೇಲೆ ಅಂಟು ದ್ರವ ನಂತರ ಕಪ್ಪು ಬೂಷ್ಟು ಬೆಳೆದು ಗಿಡಗಳ ಬೆಳವಣಿಗೆ ಕುಂಠಿತವಾಗುವುದು. | ಡೈಮಿಥೋಯೇಟ್ 30 ಇ.ಸಿ ಅಥವಾ<br>ಮಾನೋಕ್ರೋಟೋಫಾಸ್ 36 ಎಸ್.ಎಲ್<br>ಆಕ್ಸಿಡೆಮಿಟಾನ್ ಮೀಥೈಲ್ 25 ಇ.ಸಿ | 1.7 ಮಿ.ಲೀ<br>2 ಮಿ.ಲೀ<br>1.3 ಮಿ.ಲೀ | 425 ಮಿ.ಲೀ<br>250 ಮಿ.ಲೀ<br>260 ಮಿ.ಲೀ | ಹೇನುಗಳು ಬೆಳೆಯಲ್ಲಿ ಕಂಡುಬಂದಾಗ ಕೀಟನಾಶಕವನ್ನು ಬಳಸುವುದು. ಎಕರೆಗೆ 200–250 ಲೀಟರ್ ಸಿಂಪರಣಾ ದ್ರಾವಣ ಬೇಕಾಗುತ್ತದೆ. |
| ಎಲೆ ತಿನ್ನುವ ಹುಳು | ಎಲೆಗಳನ್ನು ಸಂಪೂರ್ಣವಾಗಿ ತಿಂದು ನಾಶಪಡಿಸುತ್ತವೆ. | ಪೋಸಲೋನ್ ಶೇ.4 ಡಿ ಅಥವಾ<br>ಕ್ವಿನಾಲ್‌ಫಾಸ್ ಶೇ.1.5 ಡಿ | | 8–10 ಕಿ.ಗ್ರಾಂ<br>8–10 ಕಿ.ಗ್ರಾಂ | ಹೂ ಬಿಡುವ ಮುನ್ನ ಬೆಳೆಯ ಮೇಲೆ ಬೆಳಗಿನ ಹೊತ್ತಿನಲ್ಲಿ ಧೂಳೀಕರಿಸುವುದು. |
| ಹೂ ಮೊಗ್ಗು ಮತ್ತು ಬೀಜಾಣು ಚೀಲ (ಕಾಯಿ) ಕೊರಕ | ಹೂ ಮೊಗ್ಗನ್ನು ಕೊರೆದು ತಿನ್ನುವುದರಿಂದ ಹೂ ಅರಳುವುದಿಲ್ಲ. ಮೊಗ್ಗಿನ ಮೇಲೆ ರಂಧ್ರ, ಬೀಜಾಣು ಚೀಲವನ್ನು ಕೊರೆದು ಒಳಗಿನ ಬೀಜಗಳನ್ನು ತಿನ್ನುತ್ತವೆ. | ಕ್ವಿನಾಲ್‌ಫಾಸ್ 1.5 ಡಿ ಅಥವಾ<br>ಮೆಲಾಥಿಯಾನ್ ಶೇ.5 ಡಿ | | 8–10 ಕಿ.ಗ್ರಾಂ | ಕೀಟ ಬಾಧೆ ಕಂಡುಬಂದಾಗ ಬೆಳೆಯ ಮೇಲೆ ಬೆಳಗಿನ ಹೊತ್ತಿನಲ್ಲಿ ಧೂಳೀಕರಿಸುವುದು. |

**ರೋಗಗಳು**

| ರೋಗಗಳು | ಮುಖ್ಯವಾದ ಚಿಹ್ನೆಗಳು | ರೋಗನಾಶಕಗಳು | ಪ್ರಮಾಣ ಪ್ರತಿ ಲೀಟರ್ ನೀರಿಗೆ | ಎಕರೆಗೆ ಬೇಕಾಗುವ ಪ್ರಮಾಣ | ಉಪಯೋಗಿಸಬೇಕಾದ ಕಾಲ ಮತ್ತು ವಿಧಾನ |
|---|---|---|---|---|---|
| ಸುಳಿ ಕೊಳೆಯುವ ರೋಗ | ಕಾಂಡ ಕೊಳೆತು ಕಪ್ಪಗಾಗಿ ಗಿಡಗಳು ಸಾಯುತ್ತವೆ. | ಕ್ಯಾಪ್ಟಾನ್ 50 ಡಬ್ಲ್ಯೂ.ಪಿ ಅಥವಾ<br>ಥೈರಾಮ್ 75 ಡಬ್ಲ್ಯೂ.ಪಿ | 2.5 ಗ್ರಾಂ<br>2.5 ಗ್ರಾಂ | 10 ಗ್ರಾಂ<br>10 ಗ್ರಾಂ | 3–4 ಕಿ.ಗ್ರಾಂ ಬಿತ್ತನೆ ಬೀಜಕ್ಕೆ 10 ಗ್ರಾಂ ಶಿಲೀಂಧ್ರನಾಶಕದಿಂದ ಬೀಜೋಪಚಾರ ಮಾಡುವುದು. |